2) ಬೆಂಗಳೂರು ಜಿಲ್ಲೆ - 2316 ಬೆಂಗಳೂರು ಜಿಲ್ಲೆ - 2087

3) ಬೆಳಗಾವಿ - 1481 ತುಮಕೂರು - 1656

ಮೇಲಿನ ವಿಶ್ಲೇಷಣೆಯಿದ ಬೆಂಗಳೂರು ನಗರದಲ್ಲಿ ಅಪಘಾತಗಳು ಹೆಚ್ಚಾಗಿದ್ದು ಕ್ರಮವಾಗಿ ಬೆಂಗಳೂರು ಜಿಲ್ಲೆ ಬೆಳಗಾವಿ ಮತ್ತು ತುಮಕೂರು ಜಿಲ್ಲೆಗಳು ರಾಜ್ಯದಲ್ಲಿ ಹೆಚ್ಚು ಅಪಘಾತಗಳು ಸಂಭವಿಸುವ ಸ್ಥಳಗಳಾಗಿವೆ.

ಇ) ರಾಷ್ಟ್ರೀಯ ಹೆದ್ದಾರಿ-4 ರಲ್ಲಿ ನೆಲಮಂಗಲ-ದಾಬಸ್‌ಪೇಟೆ ನಡುವೆ ಸಂಚಾರಿ ಪ್ರಥಮ ಚಿಕಿತ್ಸೆ ಘಟಕ ತೆರೆದಿದ್ದು, ತುರ್ತು ಪ್ರಕರಣಗಳಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ಅಪಘಾತ ಸ್ಥಳಗಳಲ್ಲಿ ನೆರವಾಗಲು ತುಮಕೂರು-ನೆಲಮಂಗಲ, ದಾಬಸ್ ಪೇಟೆಗಳಲ್ಲಿ ಆಂಬುಲೆನ್ಸ್ ಸೇವೆಯನ್ನು ವ್ಯವಸ್ಥೆ ಮಾಡಲಾಗಿದೆ. ಅಲ್ಲದೇ ಅಲ್ಲಲ್ಲಿ ಸಂಚಾರಿ ಉಕ್ಕಡ ಠಾಣೆಗಳು ಸಹ ಕಾರ್ಯ ನಿರ್ವಹಿಸುತ್ತಿವೆ.

ಈ) ಹೌದು. ವಿಶ್ವ ಭ್ಯಾಂಕ್ ನೆರವಿನ ಕರ್ನಾಟಕ ಆರೋಗ್ಯ ಪದ್ಧತಿಗಳ ಅಭಿವೃದ್ಧಿ ಯೋಜನೆಯಡಿ ರಾಷ್ಟ್ರೀಯ ಮತ್ತು ರಾಜ್ಯ ಹೆದ್ದಾರಿಗಳಲ್ಲಿ ಸಂಭವಿಸುವ ಅಪಘಾತಗಳಲ್ಲಿ ಗಾಯಗೊಂಡವರಿಗೆ ತುರ್ತು ಚಿಕಿತ್ಸೆ ನೀಡುವ ಸಲುವಾಗಿ, ಗರಿಷ್ಠ 50 ಕಿ.ಮಿ. ಅಂತರದಲ್ಲಿ ಅಪಘಾತ ಚಿಕಿತ್ಸಾ ಘಟಕಗಳನ್ನು ಸ್ಥಾಪಿಸಲಾಗುವುದು. ಇಂತಹ ಒಂದು ಘಟಕವನ್ನು ನೆಲಮಂಗಲ ನಗರದಲ್ಲಿಯೂ ಸ್ಥಾಪಿಸುವ ಯೋಜನೆಯಿದ್ದು ಘಟಕಕ್ಕೆ ಅಗತ್ಯವಾದ ಕಟ್ಟಡಗಳು ಪೂರ್ತಿಗೊಂಡಿದ್ದು, ಸಲಕರಣೆ ಮತ್ತು ಸಿಬ್ಬಂದಿಯನ್ನು ಒದಗಿಸಲು ಕ್ರಮ ಕೈಗೊಳ್ಳಲಾಗಿದೆ. ಘಟಕವು ಸಧ್ಯದಲ್ಲಿಯೇ ಕಾರ್ಯಾರಂಭ ಮಾಡುವ ನಿರೀಕ್ಷೆಯಿದೆ.

ರಾಜ್ಯದ ತೆರಿಗೆ ಆದಾಯದ ವಿವರಗಳ ಕುರಿತು.

2186(2763)

ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ): ಮಾನ್ಯ ಹಣಕಾಸು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ 3 ವರ್ಷಗಳ ರಾಜ್ಯದ ತೆರಿಗೆ ಆದಾಯ ಎಷ್ಟು, ತೆರಿಗೆಯೇತರ ಆದಾಯ ಎಷ್ಟು? ಕೇಂದ್ರದಿಂದ ಬಂದಿರುವ ಸ್ವೀಕೃತಿ ಹಣ ಎಷ್ಟು?

ಆ) ಕೇಂದ್ರ ಸರ್ಕಾರಕ್ಕೆ ಮತ್ತು ವಿವಿಧ ಹಣಕಾಸು ಸಂಸ್ಥೆಗಳಿಗೆ ನೀಡಬೇಕಾಗಿದ್ದ ಸಾಲದ ಮೊತ್ತ ಹಾಗೂ ಇದರ ಬಡ್ಡಿಯೆಷ್ಟು. ಈ ಪೈಕಿ ಕಳೆದ 5 ವರ್ಷಗಳಲ್ಲಿ ರಾಜ್ಯ

ಸರ್ಕಾರ ವಾಪಸ್ ಮಾಡಬೇಕಾಗಿದ್ದ ಅಸಲು ಎಷ್ಟು?

ಇ) ಕಳೆದ 10 ವರ್ಷಗಳಲ್ಲಿ ರಾಜ್ಯ ಸರ್ಕಾರವು ಪ್ರತಿ ತಿಂಗಳು ಪಡೆದಿರುವ ಓ.ಡಿ ಎಷ್ಟು. ಪ್ರತಿ ತಿಂಗಳು ರಾಜ್ಯ ಸರ್ಕಾರದ ಖಜಾನೆಯಲ್ಲಿ ಎಷ್ಟು ಹಣ ಇತ್ತು.

ಶ್ರೀ ಎಂ.ಶಿವಣ್ಣ (ಹಣಕಾಸು ರಾಜ್ಯ ಸಚಿವರು):

ಅ ಮತ್ತು ಆ) ಉತ್ತರಗಳನ್ನು ಅನುಬಂಧ 1ರಲ್ಲಿ ನೀಡಲಾಗಿರುತ್ತದೆ.

ಇ) ರಾಜ್ಯ ಸರ್ಕಾರವು ಕಳೆದ 10 ವರ್ಷಗಳಲ್ಲಿ ಪಡೆದಿರುವ ಓವರ್ ಡ್ರಾಫ್ಟ್ ಈ ಕೆಳಕಂಡಂತೆ ಇರುತ್ತದೆ. ಹಾಗೂ ಈ ಮೊತ್ತಗಳನ್ನು ಆಯ ವರ್ಷಗಳಲ್ಲಿ ಮರುಪಾವತಿ ಮಾಡಲಾಗಿರುತ್ತದೆ.

(ರೂ.ಕೋಟಿಗಳಲ್ಲಿ)

1990-91	: ರೂ. 32.04
1991-92	: ರೂ. -
1992-93	: ರೂ. 78.01
1993-94	: ರೂ.725.04
1994-95	: ರೂ.446.70
1995-96	: ರೂ.-
1996-97	: ರೂ. 99.23
1997-98	: ರೂ. 33.36
1998-99	: ರೂ. ಇಲ್ಲ
1999-2000	: ರೂ. ಇಲ್ಲ

ಖಜಾನೆಯಲ್ಲಿ ಪ್ರತಿ ದಿನ ಶಿಲ್ಕು ವ್ಯತ್ಯಾಸವಾಗುತ್ತಿರುತ್ತದೆ. ಆದುದರಿಂದ ಈ ಬಗ್ಗೆ ಮಾಹಿತಿ ನೀಡಲು ಬರುವುದಿಲ್ಲ.

ಅನುಬಂಧ

(ರೂ. ಕೋಟಿಗಳಲ್ಲಿ)

	1997-98 (ಲೆಕ್ಕ)	1998-99 (ಲೆಕ್ಕ)	1999-2000 (ಪರಿಷ್ಕೃತ)
ಅ. ತೆರಿಗೆ ರಾಜಸ್ವ	6411.87	6943.04	8182.10
ಆ. ತೆರಿಗೆ ರಹಿತ ರಾಜಸ್ವ	1264.40	1460.92	1332.23
ಇ. ಕೇಂದ್ರ ಸರ್ಕಾರದಿಂದ ಪಾಲು	2176.39	1923.92	1890.96
ಈ. ಕೇಂದ್ರ ಸರ್ಕಾರದಿಂದ ಸಹಾಯಾನುದಾನ	760.78	898.56	1698.71
ಉ. ಕೇಂದ್ರ ಸರ್ಕಾರದಿಂದ ಸಾಲಗಳು ಮತ್ತು ಮುಂಗಡಗಳು	1133.19	1551.99	757.07
ಅ ಇಂದ ಉ ವರೆಗೆ ಒಟ್ಟು	11746.63	12787.43	13861.07

ಕೇಂದ್ರ ಸರ್ಕಾರ ಮತ್ತು ವಿವಿಧ ಹಣಕಾಸು ಸಂಸ್ಥೆಗಳಿಗೆ ಕಳೆದ 3 ವರ್ಷಗಳಲ್ಲಿ ಆಯಾ ಸಾಲಾಖೈರಿಗೆ ನೀಡಬೇಕಾಗಿದ್ದ ಸಾಲದ ಮೊತ್ತ ಈ ಕೆಳಕಂಡಂತೆ ಇರುತ್ತದೆ.

(ರೂ. ಕೋಟಿಗಳಲ್ಲಿ)

ಸಾಲಾಖೈರಿಗೆ ಸಾಲ ಬಾಕಿ	ಕೇಂದ್ರ ಸರ್ಕಾರಕ್ಕೆ	ಇತರೆ	ಒಟ್ಟು
1996-97	6884.79	2304.46	9189.25
1997-98	7761.71	2684.89	10446.60
1998-99	9015.35	3449.86	12465.21
1999-2000 (ಪರಿಷ್ಕೃತ)	9428.66	5586.20	15014.86

ಕಳೆದ 5 ವರ್ಷಗಳಲ್ಲಿ ರಾಜ್ಯ ಸರ್ಕಾರವು ವಾಪಸ್ಸು ಮಾಡಿರುವ ಅಸಲು ಮೊತ್ತ ಈ ಕೆಳಕಂಡಂತೆ ಇರುತ್ತದೆ.

ರೂ.ಕೋಟಿಗಳಲ್ಲಿ

	95-96 (ಲೆಕ್ಕ)	96-97 (ಲೆಕ್ಕ)	97-98 (ಲೆಕ್ಕ)	98-99 (ಲೆಕ್ಕ)	99-2000 (ಪರಿಷ್ಕೃತ)
ಅ. ವಿವಿಧ ಹಣಕಾಸು ಸಂಸ್ಥೆಗಳಿಗೆ ಮತ್ತು ಇತರೆ	45.11	20.11	50.97	106.99	147.24
ಆ. ಕೇಂದ್ರ ಸರ್ಕಾರಕ್ಕೆ	193.71	220.76	256.27	298.35	343.77
ಅ ಮತ್ತು ಆ ಗಳ ಒಟ್ಟು	238.82	240.87	307.24	405.34	491.01

ಬಡ್ಡಿಯನ್ನು ಆಯಾ ವರ್ಷಗಳಲ್ಲಿ ಪಾವತಿ ಮಾಡಲಾಗಿದ್ದು, ಬಡ್ಡಿಯಲ್ಲಿ ಸಾಲಾಖ್ಯೆರಿಗೆ ಯಾವುದೇ ಬಾಕಿ ಇರುವುದಿಲ್ಲ.